<u>**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ನ್ಯಾಯಾಲಯ.**</u>

<u>**ಹಿರೇಕೆರೂರು.**</u>

<u>**ಸಿ.ಸಿ.ನಂಬರ್‌ಃ1022/2021**</u>

ಸಿಡಬ್ಲ್ಯೂಃ3

ಪಿಡಬ್ಲ್ಯೂಃ3

| | | |
|---|---|---|
| ಸಾಕ್ಷಿಯ ಹೆಸರು | : | ಈರಪ್ಪ ಓಲೇಕಾರ |
| ತಂದೆಯ ಹೆಸರು | : | ಹನುಮಂತಪ್ಪ |
| ವಯಸ್ಸು | : | 47 ವರ್ಷ |
| ಉದ್ಯೋಗ | : | ಗ್ರಾಮ ಸಹಾಯಕರು, ಚಿಕ್ಕೇರೂರು |
| ವಾಸಸ್ಥಳ | : | ಚಿಕ್ಕೇರೂರು |

ಇಂದು ದಿನಾಂಕಃ 04.04.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

<u>**ಮುಖ್ಯ ವಿಚಾರಣೆಃ**</u> ಮಾನ್ಯ ಎಪಿಪಿಯವರಿಂದಃ

ಸಾಕ್ಷಿಗೆ ಕಡತದಲ್ಲಿರುವ ಮಹಜರ ದಾಖಲೆಯನ್ನು ತೋರಿಸಲಾಗಿದ್ದು ಅದರಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-1 ಎಂದು ಗುರತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು 2019 ನೇ ಸಾಲಿನಲ್ಲಿ ಮಾಡಿರುತ್ತೇನೆ. ಚಾಸಾ-1 ರವರು ನನಗೂ ಮತ್ತು ಚಾಸಾ-2 ರವರಿಗೆ ಕರೆ ಮಾಡಿ ಚಿಕ್ಕೇರೂರ ಅವಲಕ್ಕಿ ಮಿಲ್ ನ ಬಳಿ ಬರಲು ಹೇಳಿದ್ದರು. ಅದರಂತೆ ನಾನು ಚಾಸಾ-2 ರವರು ಅಲ್ಲಿಗೆ ಹೋಗಿದ್ದು, ಅಲ್ಲಿ ಚಾಸಾ-1 ರವರು ಯಾವುದೋ ಒಬ್ಬ ವ್ಯಕ್ತಿ ಸಾರ್ವಜನಿಕರಿಗೆ ಕೊಡಬೇಕಾಗಿದ್ದಂತಹ ಅಕ್ಕಿಯನ್ನು ಕಾನೂನು ಬಾಹಿರವಾಗಿ ಸಾಗಾಟ ಮಾಡುತ್ತಿದ್ದಾರೆ ಆ ಕಾರಣದಿಂದ ನೀವು ಪಂಚರಾಗಿ ಸಹಕರಿಸಲು ಬರಬೇಕೆಂದು ಹೇಳಿ ನಮಗೆ ಹೇಳಿರುತ್ತಾರೆ. ಅದರಂತೆ ನಾನು ಚಿಕ್ಕೇರೂರು ಹೊರವಲಯ ಪೋಲಿಸ್ ಠಾಣೆಗೆ ಹೋಗಿದ್ದು ಅಲ್ಲಿ ಹಂಸಬಾವಿ ಪೋಲಿಸರು ಹಾಗೂ ಚಾಸಾ-1 ರವರು ನಾವು ಎಲ್ಲರೂ ಸೇರಿದ್ದು, ಸದರಿ ಟಾಟಾ ಮ್ಯಾಜಿಕ್ ಗಾಡಿಯಲ್ಲಿ ಪಡಿತರ ಅಕ್ಕಿ ಒಟ್ಟು 13 ಚೀಲಗಳಿದ್ದವು. ಸದರಿ ಚೀಲಗಳು ತಲಾ 40 ಕೆ ಜಿ ಇದ್ದವು. ಅವುಗಳಲ್ಲಿ ನಮ್ಮ ಸಮಕ್ಷಮದಲ್ಲಿ ಪರೀಕ್ಷೆಗೆಂದು ಸ್ವಲ್ಪ ಅಕ್ಕಿಯನ್ನು ತೆಗೆದುಕೊಂಡಿರುತ್ತಾರೆ. ನಂತರ ಸದರಿ ಜಾಗದಲ್ಲಿ ಪಂಚನಾಮೆಯನ್ನು ಮಾಡಿ ನಮ್ಮ ಸಹಿಗಳನ್ನು ಪಡೆದುಕೊಂಡಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರಪಡಿಸಿರುವಂತಹ ಮುದ್ದೆ ಮಾಲು-1 ನ್ನು ನೋಡಿ ಗುರುತಿಸಿರುತ್ತಾರೆ.ಆ ಸಮಯದಲ್ಲಿ ಛಾಯಚಿತ್ರವನ್ನು ತೆಗೆದಿರುತ್ತಾರೆ. ವಾಹನವನ್ನು ಹಾಗೂ ಆರೋಪಿತರನ್ನು ನೋಡಿದರೆ ಗುರತಿಸುತ್ತೇನೆ.

ಆರೋಪಿತರು ಈ ದಿನ ನ್ಯಾಯಾಲಯದ ಮುಂದೆ ಗೈರು ಹಾಜರು ಇದಿದ್ದು ಆರೋಪಿ ಪರ ವಕೀಲರು ಆರೋಪಿತರ ಗುರುತಿಸುವಿಕೆಯಲ್ಲಿ ಯಾವುದೇ ತಕರಾರು ಇಲ್ಲ ಎಂದು ಹೇಳಿದ ಮೇರೆಗೆ ಆರೋಪಿತರ ಗುರುತಿಸುವಿಕೆಯನ್ನು ಕೈಬಡಲಾಯಿತು.

**ಪಾಟೀ ಸವಾಲುಃ** ಆರೋಪಿತರ ಪರ ಶ್ರೀ ಎಂ ಬಿ ಪಿ ವಕೀಲರಿಂದಃ

ನಾನು ಚಿಕ್ಕೇರೂರನಲ್ಲಿ ಗ್ರಾಮ ಸಹಾಯಕನಾಗಿ ಕೆಲಸ ನಿರ್ವಹಿಸುತ್ತಿದ್ದೇನೆ, ನಮ್ಮ ಕಚೇರಿ ಗ್ರಾಮ ಪಂಚಾಯತಿಯ ಪಕ್ಕದಲ್ಲಿ ಇರುತ್ತದೆ. ಚಾಸಾ-1 ರವರು ನನಗೆ ಕರೆ ಮಾಡಿರುವುದಿಲ್ಲ. ನಾನು ಚಾಸಾ-2 ರವರ ಅಡಿಯಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-2 ರವರು ಸಾತೇನಹಳ್ಳಿ ಗ್ರಾಮ ಲೆಕ್ಕಾಧಿಕಾರಿ ಇರುತ್ತಾರೆ. ನಾವು ಘಟನಾ ಸ್ಥಳಕ್ಕೆ ಬಂದಾಗ 12.30 ಗಂಟೆ ಸಮಯವಾಗಿತ್ತು. ಘಟನಾ ಸ್ಥಳದ ಚಕ್ಕುಬಂದಿ ನನಗೆ ಹೇಳಲು ಆಗುವುದಿಲ್ಲ. ಪಂಚನಾಮೆಯನ್ನು ಬರೆಯಲು ಮಾಹಿತಿಯನ್ನು ನಾನು ನೀಡಿರುವುದಿಲ್ಲ. ಸದರಿ ದಾಖಲೆಯಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ. ಚಾಸಾ-1 ರವರು ನಮ್ಮ ಮೇಲಾಧಿಕಾರಿ ಎಂದರೆ ಸರಿ. ಚಾಸಾ-1 ರವರು ಸಹಿ ಮಾಡು ಎಂದು ಹೇಳಿದ ಮೇರೆಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ.

2. ವಶಪಡಿಸಿಕೊಂಡಂತಹ ಅಕ್ಕಿಯನ್ನು ನನ್ನ ಸಮಕ್ಷಮದಲ್ಲಿ ತೂಕ ಮಾಡಿಲ್ಲ. ನಿಪಿ-1 ದಾಖಲೆಯನ್ನು ನಾನು ಸ್ಥಳಕ್ಕೆ ಹೋಗುವ ಮೊದಲೇ ಬರೆದಿದ್ದರು ಎಂದರೆ ಸರಿಯಲ್ಲ. ನಂತರ ಸಾಕ್ಷಿಯು ಮುಂದುವರೆದು ನಾವು ಹೋದ ನಂತರ ಅದನ್ನು ಪೋಲಿಸರು ಬರೆದಿರುತ್ತಾರೆ. ನಾನು ಘಟನಾ ಸ್ಥಳಕ್ಕೆ ಹೋಗುವ ಪೂರ್ವದಲ್ಲಿಯೇ ವಾಹನ ಬಂದು ನಿಂತಿತ್ತು. ಸದರಿ ವಾಹನದ ಚಾಲಕ ಯಾರು ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಮುದ್ದೆ ಮಾಲು-1 ರ ಮೇಲೆ ಯಾವುದೇ ವಿಶೇಷವಾದ ಗುರುತು ಇಲ್ಲ ಎಂದರೆ ಸರಿ. ಮುದ್ದೆ ಮಾಲು-1 ರ ಮೇಲೆ ನನ್ನ ಸಹಿಯನ್ನು ಪಡೆದುಕೊಂಡಿರುವುದಿಲ್ಲ.

3. ಆರೋಪಿಗೆ ಸೇರಿದ ಒಂದು ಕಿರಾಣಿ ಅಂಗಡಿ ಚಿಕ್ಕೇರೂರನಲ್ಲಿ ಇದೆ ಎಂದರೆ ಸರಿ. ಅವರಿಗೆ ನೀರಾವರಿ ಜಮೀನುಗಳು 1 ಎಕರೆ 10 ಗುಂಟೆ ಇರುತ್ತವೆ ಎಂದರೆ ಸರಿ. ಅದೇ ರೀತಿ ಚಿಕ್ಕೇರೂರನಲ್ಲಿ ರೈಸ್ ಮಿಲ್ ಗಳು ಇವೆ ಎಂದರೆ ಸರಿ. ಆರೋಪಿ ತನ್ನ ಜಮೀನಿನಲ್ಲಿ ಬೆಳೆದಂತಹ ಭತ್ತವನ್ನು ಚಿಕ್ಕೇರೂರನಲ್ಲಿರುವ ರೈಸ್ ಮಿಲ್ ಗೆ ಹಾಕುತ್ತಾರೆ ಎಂದರೆ ಸಾಕ್ಷಿಯು ಆರೋಪಿಯು ಭತ್ತವನ್ನು ಬೆಳೆಯುವುದಿಲ್ಲ ಗೋವಿನ ಜೋಳವನ್ನು ಬೆಳೆಯುತ್ತಾರೆ ಎಂದು ನುಡಿದಿರುತ್ತಾರೆ. ಆರೋಪಿಯ ಜಮೀನಿನ ಪಕ್ಕ ನಮ್ಮ ಜಮೀನು ಇರುವುದಿಲ್ಲ. ಆರೋಪಿಯ ಅಂಗಡಿಯಲ್ಲಿ ನಾನು ಯಾವತ್ತೂ ರೇಶನ್ ನ್ನು ಖರೀಧಿಸಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಚಾಸಾ-1 ರವರು ನನ್ನನ್ನು ಘಟನಾ ಸ್ಥಳಕ್ಕ ಕರೆಯಿಸಿಲ್ಲ, ನನ್ನ ಸಮಕ್ಷಮದಲ್ಲಿ ಯಾವುದೇ ಮಹಜರನ್ನು ಮಾಡಿಲ್ಲ ಹಾಗೂ ಮುದ್ದೆ ಮಾಲು-1 ನ್ನು ವಶಪಸಿಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮೇಲಾದಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ

ಹಾಗೂ ವಾಹನಕ್ಕೂ, ಮುದ್ದೆ ಮಾಲಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಿಪಿ-1 ಕ್ಕೆ ನಾನು ಸಹಿಯನ್ನು ಠಾಣೆಯಲ್ಲಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.